# ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಲಯ

# ಬಳ್ಳಾರಿ

## ವಿಶೇಷ ಮೊಕದ್ದಮೆ ಸಂಖ್ಯೆ:991/2021

**ಪಿ.ಡಬ್ಲ್ಯೂ:1 (ಸಿಡಬ್ಲ್ಯೂ: 1 )**

**ಸಾಕ್ಷಿದಾರರ ಹೆಸರು : ಶ್ರೀ ಬಿ.ಸತ್ಯನಾರಾಣಯಣ**
**ತಂದೆಯ ಹೆಸರು : ಬಿ.ವೆಂಕಟಸ್ವಾಮಿ**
**ವಯಸ್ಸು : 47 ವರ್ಷ**
**ಕೆಲಸ : ವ್ಯವಸಾಯ**
**ವಾಸ ಸ್ಥಳ : ಬಳ್ಳಾರಿ**

**ಸಾಕ್ಷಿಯನ್ನು ದಿನಾಂಕ 30.9.2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ: ವಿಶೇಷ ಸರ್ಕಾರಿ ಅಭಿಯೋಜಕರಿಂದ:**

ಲಕ್ಷ್ಮೀದೇವಿ ನನ್ನ ತಾಯಿ. ಚಾಸಾ.22 ಶಂಕರಿ ನಮ್ಮ ಹೊಲದಲ್ಲಿ ಕೆಲಸ ಮಾಡುತ್ತಾರೆ.

**2.** ನನ್ನ ತಾಯಿಗೆ ಸರ್ವೆ ನಂ: 327/5 ಸಿದ್ದಮ್ಮನಹಳ್ಳಿಯಲ್ಲಿ ಜಮೀನು ಇದೆ. ಈಗೆ 5 ವರ್ಷದ ಹಿಂದೆ ಸದರಿ ಜಮೀನಿನಲ್ಲಿ ಪಂಪ್ ಸೆಟ್ ಅಳವಡಿಸಲಾಗಿತ್ತು. ಸದರಿ ಪಂಪ್ ಸೆಟ್ ಗೆ ಮೊದಲಿಗೆ 63 ಕೆವಿ ಸಾಮರ್ಥ್ಯದ ಟಿಸಿ ಇತ್ತು. ಅದಕ್ಕೆ ಮೊದಲು 5-6 ಪಂಪ್ ಸೆಟ್ ಕನೆಕ್ಷನ್ ಇತ್ತು. ನಂತರ ಸದರಿ ಟಿ.ಸಿ.ಗೆ ಹೆಚ್ಚುವರಿ ಕನೆಕ್ಷನ್ ನೀಡಲಾಯಿತು. ಇದರಿಂದ ಮೋಟರ್ ಸ್ಟಾಪ್ ಆಗಿತ್ತು. ಆದ್ದರಿಂದ ಕೆಇಬಿ ಕಚೇರಿಯ ಜೆಇ ಸಾಬುದ್ದೀನ್ ಎನ್ನುವವರಿಗೆ ನಾವು ಆಗಸ್ಟ 2019 ರಲ್ಲಿ ಸಂಪರ್ಕಿಸಿದ್ದು ಹೆಚ್ಚುವರಿ ಲೋಡ್ ಟಿಸಿ ಹಾಕುವಂತೆ ಕೇಳಿಕೊಂಡೆವು. ಆಗ ಅವರು ಹೆಚ್ಚುವರಿ ಲೋಡ್ ಇರುವ ಟಿಸಿ ಹಾಕಲು 2-3 ತಿಂಗಳು ಸಮಯಾವಕಾಶ ಬೇಕಾಗುತ್ತದೆ ಎಂದು ಹೇಳಿದರು. ನಮ್ಮ ಜಮೀನಿನಲ್ಲಿ ಬೆಳೆ ಬೆಳದಿದ್ದರಿಂದ ನಾವು ಹೆಚ್ಚು

ಲೋಡ್ ಇರುವ ಟಿ.ಸಿ ಹಾಕಿಸುವ ಸಲುವಾಗಿ ಎಸಿಬಿ ಕಚೇರಿಗೆ ಹೋಗಿ ಟಿಸಿ ಹಾಕುತ್ತಿಲ್ಲ , ಸತಾಯಿಸುತ್ತಿದ್ದಾರೆ ಎಂದು ಹೇಳಿದೆನು. ಆಗ ಅವರು ದೂರು ಕೊಡುವಂತೆ ಹೇಳಿದರು. ನಾನು ನೀಡಿದ ದೂರನ್ನು ಗುರುತಿಸುತ್ತೇನೆ. ದೂರನ್ನು **ನಿಪಿ.1** ಎಂದು ಸಾಕ್ಷಿಯ ಸಹಿಯನ್ನು **ನಿಪಿ.1(ಎ)** ಎಂದು ಗುರುತಿಸಲಾಯಿತು. ಕನೆಕ್ಷನ್ ಕೊಡಲು ಹಣ ಕೇಳುತ್ತಿದ್ದಾರೆ ಎಂದು ಹೇಳಿದ್ದೇನೆ. ಯಾರು ಹಣ ಕೇಳುತ್ತಿದ್ದಾರೆ ಎಂದು ನಾನು ಫಿರ್ಯಾದಿಯಲ್ಲಿ ಹೇಳಿಲ್ಲ. ರೂ.6500/- ಕೇಳುತ್ತಿದ್ದಾರೆ ಎಂದು ಹೇಳಿದ್ದೇನೆ. ಹಣ ಕೇಳುತ್ತಿದ್ದಾರೆ ಎನ್ನುವ ವಿಷಯವನ್ನು ನಮ್ಮ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಶಂಕರಿ ಹೇಳಿದ್ದಾರೆ. ನಾನು ಪೊಲೀಸರ ಮುಂದೆ ನನ್ನ ಫೋನ್ ಮತ್ತು ರೂ.6500/- ಹಾಜರುಪಡಿಸಿದ್ದೇನೆ.

**3.** ನಾನು ಫಿರ್ಯಾದು ಕೊಟ್ಟ ನಂತರ ಪೊಲೀಸರು ಇಬ್ಬರು ಸರ್ಕಾರಿ ಸಿಬ್ಬಂದಿಗಳನ್ನು ಕರೆಸಿದ್ದರು. ಅವರಲ್ಲಿ ಒಬ್ಬರ ಹೆಸರು ಆನಂದ ನಾಯಕ್ , ಇನ್ನೊಬ್ಬನ ಹೆಸರು ನೆನಪಿಲ್ಲ. 500 ಮುಖಬೆಲೆಯ 13 ನೋಟುಗಳನ್ನು ಹಾಜರುಪಡಿಸಿದ್ದೇನೆ. ಅಲ್ಲಿಗೆ ಬಂದಿದ್ದ ಸರ್ಕಾರಿ ನೌಕರನು ಸದರಿ ಹಣವನ್ನು ಎಣಿಸಿದನು. ನಂತರ ಸದರಿ ನೋಟಿನ ಮೇಲೆ ದ್ರಾವಣವನ್ನು ಹಾಕಿದ್ದಾರೆ. ಪೊಲೀಸರು ನನ್ನ ಮೊಬೈಲ್ ತೆಗೆದುಕೊಂಡು ಚೆಕ್ ಮಾಡಿದ್ದಾರೆ. ಈಗ ತೋರಿಸಿದ ದಾಖಲೆಯಲ್ಲಿ ನನ್ನಸಹಿ ಇದೆ. ಸದರಿ ದಾಖಲೆಯನ್ನು **ನಿಪಿ.2** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.2 (ಎ)** ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ 10 ಫೋಟೋ ಗಳನ್ನು ಗುರುತಿಸುತ್ತೇನೆ. ಅವುಗಳನ್ನು **ನಿಪಿ.3** ಎಂದು ಗುರುತಿಸಲಾಯಿತು.

**4.** ನಂತರ ನಾನು, ಪೊಲೀಸರು ಮತ್ತು ಇಬ್ಬರು ಪಂಚರು ವಿವಿಧ ವಾಹನಗಳಲ್ಲಿ ಕೆಇಬಿ ಕಚೇರಿಗೆ ಹೋಗಿರುತ್ತೇವೆ. ಜೆರಾಕ್ಸ ಸೆಂಟರ್ ಹತ್ತಿರ ನಿಂತಿದ್ದಾಗ ಚಂದ್ರು ಎನ್ನುವ ಲೈನ್ ಮ್ಯಾನ್ ಅಲ್ಲಿಗೆ ಬಂದಿದ್ದಾನೆ. ಆತ ನನ್ನಿಂದ ರೂ.6500/- ಪಡೆದುಕೊಂಡನು. ಸದರಿ ಚಂದ್ರು

ಎನ್ನುವ ವ್ಯಕ್ತಿ ಈಗ ನ್ಯಾಯಾಲಯದ ಮುಂದಿರುವ ಆರೋಪಿ ಇರುತ್ತಾನೆ. ನಾನು ಹಣವನ್ನು ಪಾವತಿ ಮಾಡಿದ ನಂತರ ನನ್ನ ತಲೆಯನ್ನು ಸವರುವ ಮೂಲಕ ಸೂಚನೆ ನೀಡಿದ್ದು ಪೊಲೀಸರು ಸ್ಥಳಕ್ಕೆ ಬಂದರು. ಆರೋಪಿಯೊಂದಿಗೆ ಹೊನ್ನೂರು ಸ್ವಾಮಿ ಚಾಸಾ.13 ರವರು ಇದ್ದರು. ಪೊಲೀಸರು ಸೋಡಿಯಂ ದ್ರಾವಣಕ್ಕೆ ಆರೋಪಿಯ ಕೈಯನ್ನು ಅದ್ದಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು. ಆರೋಪಿಯು ತನ್ನ ಜೇಬಿನಲ್ಲಿ ಇಟ್ಟುಕೊಂಡಿದ್ದ ರೂ.6500/- ಪೊಲೀಸರು ತೆಗೆದುಕೊಂಡರು. ಅಲ್ಲಿಂದ ಕೆಇಬಿ ಕಚೇರಿಗೆ ಕರೆದುಕೊಂಡು ಹೋದರು ಮತ್ತು ಕಂಪ್ಯೂಟರ್ ಮೂಲಕ ಬರವಣಿಗೆ ಮಾಡಿದ್ದಾರೆ. ನನಗೆ ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು **ನಿಪಿ.4** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.4 (ಎ)** ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ 12 ಫೋಟೋ ಗಳನ್ನು ಗುರುತಿಸುತ್ತೇನೆ. 12 ಫೋಟೋ ಗಳನ್ನು **ನಿಪಿ.5** ಎಂದು ಗುರುತಿಸಲಾಯಿತು.

**5.** ನಿಪಿ.4 ಪಂಚನಾಮೆಯಾದ 1 ತಿಂಗಳ ನಂತರ ನನ್ನನ್ನು ಪೊಲೀಸರು ಕರೆಸಿ ದಾಖಲೆಯನ್ನು ಓದಿಸಿರುತ್ತಾರೆ. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು **ನಿಪಿ.6** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.6 (ಎ)** ಎಂದು ಗುರುತಿಸಲಾಯಿತು. ನಾನು ಓದಿದ ದಾಖಲೆಯನ್ನು ಗುರುತಿಸುತ್ತೇನೆ. ಸದರಿ ದಾಖಲೆಗಳನ್ನು **ನಿಪಿ.**7 **ರಿಂದ 10** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.7(ಎ) ರಿಂದ 10(ಎ)** ಎಂದು ಗುರುತಿಸಲಾಯಿತು. ನಾನು ದಾಖಲೆಗಳನ್ನು ಓದುವ ಕಾಲಕ್ಕೆ ತೆಗೆದ ಫೋಟೋ ವನ್ನು ಗುರುತಿಸುತ್ತೇನೆ. ಅದನ್ನು **ನಿಪಿ.11** ಎಂದು ಗುರುತಿಸಲಾಯಿತು. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು **ನಿಪಿ.12** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.12 (ಎ)** ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ನಾನು ಟಿ.ಸಿ ತೋರಿಸಿದ ಸಮಯದಲ್ಲಿ

ಬರೆಯಲಾಗಿದೆ. 63 ವೋಲ್ಟ ರಿಂದ 100 ಕೆಬಿ ಟಿಸಿ ಯನ್ನು ಅಳವಡಿಸಿದಾಗ ನಿಪಿ.12 ದಾಖಲೆಯನ್ನು ಬರೆದಿದ್ದಾರೆ. ಫೋಟೋ ವನ್ನು ಗುರುತಿಸುತ್ತೇನೆ. ಫೋಟೋ ವನ್ನು **ನಿಪಿ.13** ಎಂದು ಗುರುತಿಸಲಾಯಿತು. ನನ್ನ ಮತ್ತು ಶಾಬುದ್ದೀನ್ ನಡುವೆ ನಡದ ಸಂಭಾಷಣೆಯ ಧ್ವನಿ ಮುದ್ರಣ ಕಾಲಕ್ಕೆ ಬರೆದ ಪಂಚನಾಮೆಯನ್ನು ಗುರುತಿಸುತ್ತೇನೆ. ಸದರಿ ಪಂಚನಾಮೆಯನ್ನು **ನಿಪಿ.14** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.14(ಎ)** ಎಂದು ಗುರುತಿಸಲಾಯಿತು. ಫೋಟೋ ವನ್ನು **ನಿಪಿ.15** ಎಂದು ಗುರುತಿಸಲಾಯಿತು. 63 ಕೆವಿಯಿಂದ 100 ಕೆವಿ ಟಿಸಿ ಅಳವಡಿಸಿದ್ದ ಕಾಲಕ್ಕೆ ಆರೋಪಿ ನನ್ನಿಂದ ಹಣದ ಬೇಡಿಕೆ ಇಟ್ಟಿಲ್ಲ.

***(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಮತ್ತು ಪಾಟಿ ಸವಾಲಿಗೆ ಒಳಪಡಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)***

**ಪಾಟಿ ಸವಾಲುಃ ವಿಶೇಷ ಸರ್ಕಾರಿ ಅಬಿಯೋಜಕರಿಂದಃ**

**6.** ದಿಃ28.8.2019 ರಂದು ನಾನು 63 ಕೆವಿಯಿಂದ 100 ಕೆವಿ ಟಿ.ಸಿ ಅಳವಡಿಸಲು ಜೆ.ಇ ರವರನ್ನು ಕೇಳಿಕೊಂಡಾಗ ಅವರು ನನಗೆ ಲೈನ್ ಮ್ಯಾನ್ ಚಂದ್ರ ರವರನ್ನು ಕಾಣಲು ತಿಳಿಸಿದರು ಮತ್ತು ನಾನು ಆತನೊಂದಿಗೆ ಮಾತನಾಡಿದ್ದನ್ನು ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದೇನೆ ಎನ್ನುವುದು ಸರಿ . ನಾನು ಆರೋಪಿ ಚಂದ್ರುವನ್ನು ಬೇಟಿ ಮಾಡಿ ಹೊಸ ಕನೆಕ್ಷನ್ ಕೇಳಿದಾಗ ಆತ ರೂ.6500/- ಬೇಡಿಕೆ ಇಟ್ಟಿದ್ದ ಎನ್ನುವುದು ಸರಿಯಲ್ಲ. 28.8.2019 ರಂದು ನಾನು ಬೆಳಿಗ್ಗೆ 7.45 ಗಂಟೆಯಲ್ಲಿ ಆರೋಪಿಯೊಂದಿಗೆ ಮಾತನಾಡಿದ್ದೇನೆ ಎನ್ನುವುದು ಸರಿ . ಆತ ಹೊಸ ಕನೆಕ್ಷನ್ ಕೊಡಲು 6500 ಹಣ ಕೊಡಬೇಕು ಎಂದು ಬೇಡಿಕೆ ಇಟ್ಟಿದ್ದನು ಎನ್ನುವುದು ಸರಿ . ನಾನು ಅಷ್ಟು ಹಣ ಕೊಡಲು ಆಗುವುದಿಲ್ಲ ಎಂದು ಹೇಳಿದ್ದೇನೆ ಎನ್ನುವುದು

ಸರಿ . ನನ್ನ ಮತ್ತು ಆತನ ಸಂಭಾಷಣೆಯನ್ನು ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದೇನೆ ಎನ್ನುವುದು ಸರಿ . ನಾನು ಶಂಕರಿಯವರಿಗೆ ಫೋನ್ ಮಾಡಿದಾಗ ಅವರು 100 ಕೆವಿ ಟಿಸಿಯನ್ನು ಅಳವಡಿಸಿದ ಬಗ್ಗೆ ಹೇಳಿದ್ದು ನಾನು ರೂ.6500/- ಹಣವನ್ನು ಕೊಡದಿದ್ದರೆ ಟಿಸಿ ಕನೆಕ್ಷನ್ ಕಟ್ ಮಾಡುತ್ತಾರೆ ಎಂದು ಹೇಳಿದ್ದಾರೆ ಎಂದು ನನಗೆ ತಿಳಿಸಿದ್ದಾರೆ ಎನ್ನುವುದು ಸರಿ . ಮಧ್ಯಾಹ್ನ 12.30 ಗಂಟೆಯಲ್ಲಿ ಆರೋಪಿ ನನಗೆ ಕರೆ ಮಾಡಿ ಹಣ ತಂದು ಕೊಡದಿದ್ದರೆ ಕನೆಕ್ಷನ್ ಡಿಸ್ ಕನೆಕ್ಷನ್ ಮಾಡುತ್ತೇನೆ ಎಂದು ಹೇಳಿರುತ್ತಾರೆ ಎನ್ನುವುದು ಸರಿ . ನಾನು ಸಂಜೆ ಹಣವನ್ನು ಮುಟ್ಟಿಸುತ್ತೇನೆ ಎಂದು ಹೇಳಿದ್ದೇನೆ ಎನ್ನುವುದು ಸರಿ . ಲಂಚದ ಹಣ ಕೊಡಲು ಇಷ್ಟ ಇಲ್ಲದ ಕಾರಣ ನಾನು ಎಸಿಬಿ ಕಚೇರಿಗೆ ಹೋಗಿ ನಿಪಿ.1 ರಂತೆ ಫಿರ್ಯಾದಿ ಕೊಟ್ಟಿದ್ದೇನೆ ಎನ್ನುವುದು ಸರಿ. ನಾನು ಎಸಿಬಿ ಕಚೇರಿಯಲ್ಲಿ ನನ್ನ ಮೊಬೈಲ್ ಮತ್ತು ರೂ.6500/- ಹಣವನ್ನು ಕೊಟ್ಟಿದ್ದೇನೆ ಎನ್ನುವುದು ಸರಿ. ಎಸಿಬಿ ಪೊಲೀಸರು ಮಧ್ಯಾಹ್ನ 3.45 ಗಂಟೆಗೆ ಆನಂದ ಮತ್ತು ರವಾಘವೇಂದ್ರ ರವರನ್ನು ಠಾಣೆಗೆ ಕರೆಸಿದ್ದು ಅವರನ್ನು ನನಗೆ ಪರಿಚಯ ಮಾಡಿಸಿ ನನ್ನ ಫಿರ್ಯಾದಿಯ ನಕಲನ್ನು ಅವರಿಗೆ ಓದಲು ಹೇಳಿದ್ದು ಅವರು ಅದನ್ನು ಓದಿದ್ದಾರೆ ಸರಿ ಇದೆ ಎಂದು ನಾನು ಒಪ್ಪಿದ್ದೇನೆ ಎನ್ನುವುದು ಸರಿ . ಪೊಲೀಸರು ರಾಘವೇಂದ್ರ ರವರನ್ನು ಪಂಚ ನಂ:1 ಎಂದು ಆನಂದ ರವರನ್ನು ಪಂಚ ನಂ:2 ಎಂದು ನೇಮಕ ಮಾಡಿದ್ದಾರೆ ಎನ್ನುವುದು ಸರಿ . ನಾನು ಹಾಜರುಪಡಿಸಿದ 500 ಮುಖಬೆಲೆಯ 13 ನೋಟುಗಳ ಸಂಖ್ಯೆಯನ್ನು ಓದಿ ಒಂದು ಹಾಳೆಯಲ್ಲಿ ಬರೆದುಕೊಂಡರು ಎನ್ನುವುದು ಸರಿ . ಸದರಿ ಹಾಳೆಗೆ ನಾನು ಸಹಿ ಮಾಡಿದ್ದೇನೆ. ಹಾಳೆಯನ್ನು **ನಿಪಿ.16** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.16(ಎ)** ಎಂದು ಗುರುತಿಸಲಾಯಿತು. ಪೊಲೀಸರು ಫಿನಾಪ್ತಲಿನ್ ಪುಡಿ ಮತ್ತು ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ತರಿಸಿ ನನಗೆ ತೋರಿಸಿದರು ಎನ್ನುವುದು ಸರಿ . ಸೋಡಿಯ ಕಾರ್ಬೋನೇಟ್ ಗೆ ಡಿಸ್ಟಲ್ ವಾಟರ್ ಹಾಕಿ ಒಂದು ಬಣ್ಣ ರಹಿತ ದ್ರಾವಣವನ್ನು ತಯಾರಿಸಿದರು ಎನ್ನುವುದು ಸರಿ . ಫಿನಾಪ್ತಲಿನ್ ಸವರಿದ

ನೋಟುಗಳನ್ನು ರಾಘವೇಂದ್ರ ರವರ ಕೈಗೆ ಕೊಟ್ಟಿದ್ದು, ರಾಘವೇಂದ್ರ ರವರ ಕೈಯನ್ನು ಸದರಿ ದ್ರಾವಣಕ್ಕೆ ಅದ್ದಿದಾಗ ಸದರಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು ಎನ್ನುವುದು ಸರಿ . ಇನ್ಸಪೆಕ್ಟರ್ ರವರು ನನಗೆ ರಾಸಾಯನಿಕ ಪ್ರಕ್ರಿಯೆ ಬಗ್ಗೆ ವಿವರಿಸಿದ್ದಾರೆ ಎನ್ನುವುದು ಸರಿ . ಇನ್ಸಪೆಕ್ಟರ್ ರವರು ಪಂಚ 1 ರವರ ಮುಖಾಂತರ ಫಿನಾಪ್ತಲಿನ್ ಪುಡಿ ಸವರಿದ ಹಣವನ್ನು ನನ್ನ ಜೇಬಿಗೆ ಇರಿಸಿ ಆರೋಪಿಯು ಹಣವನ್ನು ಬೇಡಿಕೆ ಇಟ್ಟಾಗ ಆತನಿಗೆ ಕೊಡಬೇಕು ಮತ್ತು ಆತ ಹಣ ಪಡೆದ ನಂತರ ತಲೆಯನ್ನು ಸವರುವ ಮೂಲಕ ಸೂಚನೆ ನೀಡಬೇಕು ಎಂದು ತಿಳಿಸಿದರು ಎನ್ನುವುದು ಸರಿ . ಪಂಚ 2 ರವರು ನನ್ನೊಂದಿಗೆ ಇದ್ದು ನನ್ನ ಮತ್ತು ಆರೋಪಿಯ ನಡುವೆ ನಡೆಯುವ ಸಂಭಾಷಣೆಯನ್ನು ಗಮನಿಸಬೇಕು ಮತ್ತು ಅಲ್ಲಿ ನಡೆಯುವ ಪ್ರಕ್ರಿಯೆ ನಮಗೆ ತಿಳಿಸಬೇಕು ಎಂದು ಹೇಳಿದರು ಎನ್ನುವುದು ಸರಿ . ನನ್ನ , ಜೆ.ಇ ಶಾಬುದ್ದೀನ್ ಮತ್ತು ಆರೋಪಿ ನಡುವೆ ಆದ ಸಂಭಾಷಣೆಯು ಮೊಬೈಲ್ ನಲ್ಲಿ ದಾಖಲು ಆಗಿದ್ದು ಸದರಿ ಸಂಭಾಷಣೆಯನ್ನು ಪ್ಲೇ ಮಾಡಿ ಲ್ಯಾಪ್ ಟಾಪ್ ಗೆ ಹಾಕಿ 2 ಖಾಲಿ ಸಿಡಿಗಳಲ್ಲಿ ಡೌನ್ ಲೋಡ್ ಮಾಡಿದ್ದಾರೆ ಎನ್ನುವುದು ಸರಿ. ಈ ಪ್ರಕ್ರಿಯೆಯನ್ನು ನಿಪಿ.2 ಪಂಚನಾಮೆಯಲ್ಲಿ ಬರೆಯಲಾಗಿದೆ ಎನ್ನುವುದು ಸರಿ . ಸೋಡಿಯಂ ಕಾರ್ಬೋನೇಟ್ ಮತ್ತು ಡಿಸ್ಟಲ್ ವಾಟರ್ ಹಾಕಿ ತಯಾರಿಸಿದ ದ್ರಾವಣವನ್ನು ಒಂದು ಬಾಟಲಿಯಲ್ಲಿ ಹಾಕಿ ಸೀಲ್ ಮಾಡಿದ್ದಾರೆ ಎನ್ನುವುದು ಸರಿ . ನ್ಯಾಯಾಲಯದ ಮುಂದೆ ಖಾಲಿ ಪ್ಲಾಸ್ಟಿಕ್ ಬಾಟಲಿ ಇದ್ದು ಅದನ್ನು **ಎಂಒ 1** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಬಾಟಲಿಯಲ್ಲಿರುವ ದ್ರಾವಣವನ್ನು ಗುರುತಿಸುತ್ತೇನೆ. ಸದರಿ ಬಾಟಲಿಯನ್ನು **ಎಂಒ 2** ಎಂದು ಗುರುತಿಸಲಾಯಿತು. ಎಂಒ 2 ರಲ್ಲಿ ಪಂಚ ನಂಃ1 ರವರ ಕೈ ತೊಳೆದ ದ್ರಾವಣ ಇರುತ್ತದೆ. ಸ್ಯಾಂಪಲ್ ಫಿನಾಪ್ತಲಿನ್ ಮತ್ತು ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ನೋಡಿದರೆ ಗುರುತಿಸುತ್ತೇನೆ. (ಸೀಲ್ಡ್ ಕವರ್ ಗಳನ್ನು ತೆರೆಯಲು ವಿಶೇಷ ಅಭಿಯೋಜಕರು

ಅನುಮತಿ ಕೋರಿದ್ದು ಅನುಮತಿ ನೀಡಲಾಗಿದೆ.) ಅವುಗಳನ್ನು **ಎಂ.ಒ.3 ಮತ್ತು 4** ಎಂದು ಗುರುತಿಸಲಾಯಿತು.

7. ನಾನು , ಆರೋಪಿ ಮತ್ತು ಶಾಬುದ್ದೀನ್ ರವರು ಮಾಡಿದ ಸಂಭಾಷಣೆಯಲ್ಲಿ ದಾಖಲು ಮಾಡಿದ ಸಿಡಿಗಳನ್ನು ನೋಡಿದರೆ ಗುರುತಿಸುತ್ತೇನೆ. (ಸೀಲ್ಡ್ ಕವರ್ ಗಳನ್ನು ತೆರೆಯಲು ವಿಶೇಷ ಅಭಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಗಿದೆ.) ಸದರಿ ಸಿಡಿಗಳನ್ನು **ನಿಪಿ.17 ಮತ್ತು 18** ಎಂದು ಗುರುತಿಸಲಾಯಿತು. ಸದರಿ ಪ್ರಕ್ರಿಯೆ ಕಾಲಕ್ಕೆ ಫೋಟೋ ತೆಗೆದು ಪಂಚನಾಮೆ ಬರೆದಿದ್ದಾರೆ ಎನ್ನುವುದು ಸರಿ . ಪಂಚನಾಮೆ ಮುಗಿದ ನಂತರ ಮಧ್ಯಾಹ್ನ 3.45 ಗಂಟೆಗೆ ನಾನು ಆರೋಪಿಗೆ ಕರೆ ಮಾಡಿದಾಗ ಆತ ಬ್ಯಾಂಕ್ ಹತ್ತಿರ ಬರುವಂತೆ ತಿಳಿಸಿದ ಎನ್ನುವುದು ಸರಿ . ಅದರಂತೆ ನಾನು ಮತ್ತು ಪಂಚ ನಂಃ2 ಸೇರಿಕೊಂಡು ಬ್ಯಾಂಕ್ ಹತ್ತಿರ ಹೋದಾಗ ಆರೋಪಿ ಇನ್ನೊಬ್ಬನೊಂದಿಗೆ ಸೇರಿಕೊಂಡ ಬ್ಯಾಂಕ್ ಹತ್ತಿರ ಬಂದಿದ್ದು, ನಾನು ಆರೋಪಿಗೆ ಹಣವನ್ನು ಕೊಟ್ಟಿದ್ದು ಆರೋಪಿ ಅದನ್ನು ಪಡೆದುಕೊಂಡು , ಎಣಿಸಿ ತನ್ನ ಜೇಬಿನಲ್ಲಿ ಇಟ್ಟುಕೊಂಡನು, ನಾನು ಸಿಗ್ನಲ್ ಕೊಟ್ಟಿದ್ದು ಇನ್ಸಪೆಕ್ಟರ್ ಬಂದಾಗ ಈತ ನನ್ನಿಂದ ಹಣ ಪಡೆದುಕೊಂಡಿದ್ದಾನೆ ಎಂದು ಹೇಳಿದ್ದೇನೆ ಎನ್ನುವುದುಸರಿ . ಇನ್ಸಪೆಕ್ಟರ್ ರವರು 2 ಬೌಲ್ನಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರು ಮಾಡಿ ಆರೋಪಿಯ 2 ಕೈಗಳನ್ನು ಪ್ರತ್ಯೇಕವಾಗಿ ಸದರಿ ದ್ರಾವಣದಲ್ಲಿ ಅದ್ದಿದಾಗ ಸದರಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಎನ್ನುವುದು ಸರಿ . ಆರೋಪಿಯು ರೂ.6500/- ರೂಪಾಯಿ ಹಣವನ್ನುಇನ್ಸಪೆಕ್ಟರ್ ಮುಂದೆ ಹಾಜರುಪಡಿಸಿದ್ದು , ಪೊಲೀಸರು ಅದನ್ನುಪಂಚರ ಸಮಕ್ಷಮದಲ್ಲಿ ಅಮಾನತ್ತುಪಡಿಸಿಕೊಂಡರು ಮತ್ತು ಪ್ಯಾಂಟ್ ನ ಜೇಬ್ ನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ಅದು ಸಹ ಗುಲಾಬಿ ಬಣ್ಣಕ್ಕೆ ತಿರುಗಿದ್ದು ಸದರಿ ದ್ರಾವಣವನ್ನು ಅಮಾನತ್ತುಪಡಿಸಿಕೊಂಡಿದ್ದಾರೆ ಎನ್ನುವುದು ಸರಿ. ಆರೋಪಿಗೆ ಬೇರೆ ಪ್ಯಾಂಟ್ ವ್ಯವಸ್ಥೆ ಮಾಡಿ ಪ್ಯಾಟ್ ನ್ನು

ಅಮಾನತ್ತುಪಸಿಡಿಕೊಂಡಿದ್ದಾರೆ ಎನ್ನುವುದು ಸರಿ .ಸಾರ್ವಜನಿಕ ಸ್ಥಳದಲ್ಲಿ ಪಂಚನಾಮೆ ಮಾಡುವುದು ಸರಿ ಕಾಣುವುದಿಲ್ಲ ಎಂದು ನಾವೆಲ್ಲರೂ ಸೇರಿಕೊಂಡು ಆರೋಪಿಯನ್ನು ಜೆಸ್ಕಾಂ ಕಚೇರಿಗೆ ಕರೆದುಕೊಂಡು ಹೋದೆವು ಎನ್ನುವುದು ಸರಿ . ನಾನು ಮತ್ತು ಆರೋಪಿ ಆತನೊಂದಿಗೆ ಸಂಭಾಷಣೆಯನ್ನು ನಾನು ರೆಕಾರ್ಡ್ ಮಾಡಿಕೊಂಡಿದ್ದು ಅದನ್ನು ಹಾಜರುಪಡಿಸಿದ್ದು ಅದನ್ನು ಪ್ಲೇ ಮಾಡಿದಾಗ ನಾನು ಮತ್ತು ಆರೋಪಿ ಮಾತನಾಡಿದ ಸಂಭಾಷಣೆ ವಾಯ್ಸ ರೆಕಾರ್ಡ್‌ರನಲ್ಲಿ ದಾಖಲು ಆಗಿದ್ದು ಅದನ್ನು 2 ಸಿಡಿಗೆ ರೆಕಾರ್ಡ್ ಮಾಡಲಾಯಿತು ಎನ್ನುವುದು ಸರಿ . ಚಾಸಾ.10 ಮತ್ತು 11 ರವರನ್ನು ಸದರಿ ಸ್ಥಳಕ್ಕೆ ಕರೆಸಿದ್ದು ಅವರ ಸಮಕ್ಷಮದಲ್ಲಿ ಹಣವಹಿಸಿಕೊಟ್ಟ ಪಂಚನಾಮೆ ಕಾಲಕ್ಕೆ ದಾಖಲಾದ ಸಿಡಿಯನ್ನು ಪ್ಲೇಮಾಡಿ ಅವರಿಬ್ಬರಿಗೆ ಕೇಳಿಸಿದಾಗ ಅವರು ಆರೋಪಿಯ ಧ್ವನಿಯನ್ನು ಗುರುತಿಹಿಡಿದರು ಎನ್ನುವುದು ಸರಿ . ಚಾಸಾ.15 ರಲ್ಲಿ ರವರು ನನ್ನ ಧ್ವನಿಯನ್ನು ಗುರುತಿಸಿದ್ದಾರೆ ಎನ್ನುವುದು ಸರಿ . ಆರೋಪಿಯು ತಾನು ಹಣ ಸ್ವಾಧೀನ ಹೊಂದಿದ್ದ ಬಗ್ಗೆ ವಿವರಣೆಯನ್ನು ಬರೆದುಕೊಟ್ಟಿದ್ದ ಎನ್ನುವುದು ಸರಿ . ಆರೋಪಿ ಬರೆದುಕೊಟ್ಟ ವಿವರಣೆಯನ್ನು ಗುರುತಿಸಲು ಆಗುವುದಿಲ್ಲ. ಆರೋಪಿ ಬರೆದುಕೊಟ್ಟ ವಿವರಣೆಯನ್ನು ಪೊಲೀಸರು ನನಗೆ ತೋರಿಸಿದಾಗ ಅದರಲ್ಲಿ ಬರೆದ ವಿಷಯಗಳು ಸುಳ್ಳಿನಿಂದ ಕೂಡಿದೆ ಎಂದು ನಾನು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಇನ್ಸಪೆಕ್ಟರ್ ರವರು ಚಾಸಾ12 ಅಶೋಕ್ ರೆಡ್ಡಿ ರವರಿಗೆ ಟಿಸಿ ಅಳವಡಿಕೆಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆ ಕೇಳಿದ್ದು ಅದರಂತೆ ಚಾಸಾ.12 ರವರು ದಾಖಲೆಗಳನ್ನು ಹಾಜರುಪಡಿಸಿದರು ಎನ್ನುವುದು ಸರಿಯಲ್ಲ. ಟ್ರ್ಯಾಪ್ ಪಂಚನಾಮೆ ಕಾಲಕ್ಕೆ ತಯಾರಿಸಿದ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ಗುರುತಿಸುತ್ತೇನೆ. ಅದನ್ನು **ಎಂಒ 5** ಎಂದು ಗುರುತಿಸಲಾಯಿತು.

**8.** ನನಗೆ ಈಗ ತೋರಿಸಿದ ದ್ರಾವಣವು ಆರೋಪಿಯ ಕೈಗಳನ್ನು ತೊಳೆದು ಸಂಗ್ರಹಿಸಿದ ದ್ರಾವಣ ಎನ್ನುವುದು ಸರಿ . ಸದರಿ ದ್ರಾವಣವನ್ನು **ಎಂಒ 6 ಮತ್ತು** 7 ಎಂದು

ಗುರುತಿಸಲಾಯಿತು. ಆರೋಪಿಯ ಪ್ಯಾಂಟ್ ನೋಡಿದರೆ ಗುರುತಿಸುತ್ತೇನೆ. (ಸೀಲ್ಡ್ ಕವರ್ ಗಳನ್ನು ತೆರೆಯಲು ವಿಶೇಷ ಅಭಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಗಿದೆ.) ಸಾಕ್ಷಿಗೆ ಪ್ಯಾಂಟ್ ತೋರಿಸಲಾಗಿ ಸದರಿ ಪ್ಯಾಂಟ್ ನ್ನು ಸಾಕ್ಷಿಯು ಗುರುತಿಸಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಸಂಭಾಷಣೆ ದಾಖಲಾದ ಸಿಡಿಯನ್ನು ನೋಡಿದರೆ ಗುರುತಿಸಬಹುದು. (ಸೀಲ್ಡ್ ಕವರ್ ಗಳನ್ನು ತೆರೆಯಲು ವಿಶೇಷ ಅಭಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಗಿದೆ.) ಸಿಡಿಗಳನ್ನು **ನಿಪಿ.19 ಮತ್ತು 20** ಎಂದು ಗುರುತಿಸಲಾಯಿತು. ನಿಪಿ.4 ಪಂಚನಾಮೆಯನ್ನು ಜೆಸ್ಕಾಂ ಕಚೇರಿಯಲ್ಲಿ ಬರೆದು ಫೋಟೋ ವನ್ನು ತೆಗೆದಿದ್ದಾರೆ ಎನ್ನುವುದು ಸರಿ . ದಿಃ29.8.2019 ರಂದು ನನ್ನನ್ನು ಮತ್ತು ಪಂಚರನ್ನು ಎಸಿಬಿ ಕಚೇರಿಗೆ ಕರೆಸಿ ನನ್ನ ಮೊಬೈಲ್ ನ್ನು ಹಾಜರುಪಡಿಸಲು ಹೇಳಿದ್ದು ನಾನು ಅದನ್ನು ಹಾಜರುಪಡಿಸಿದ್ದು ಅದರಲ್ಲಿ ದಾಖಲಾಗಿದ್ದ ಸಂಭಾಷಣೆಯನ್ನು ಪ್ಲೇ ಮಾಡಿದ್ದು ಅದನ್ನು ಸಿಡಿಯಲ್ಲಿ ದಾಖಲು ಮಾಡಿಕೊಳ್ಳಲಾಯಿತು ಎನ್ನುವುದು ಸರಿ . (ಸೀಲ್ಡ್ ಕವರ್ ಗಳನ್ನು ತೆರೆಯಲು ವಿಶೇಷ ಅಭಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಗಿದೆ.) ಸದರಿ ಸಿಡಿಗಳನ್ನು **ನಿಪಿ.21 ಮತ್ತು 22** ಎಂದು ಗುರುತಿಸಲಾಯಿತು.

**9.** ದಿಃ6.11.2019 ರಂದು ನನ್ನನ್ನು ಮತ್ತು ಇಬ್ಬರು ಪಂಚರಾದ ಈರಮ್ಮ ಮತ್ತು ಲೋಕನಾಥ ರವರನ್ನು ಎಸಿಬಿ ಕಚೇರಿಗೆ ಕರೆಸಿ ನನ್ನ ಮತ್ತು ಆರೋಪಿಯ ನಡುವೆ ಹಣವಹಿಸಿಕೊಟ್ಟ ಪಂಚನಾಮೆ ಮತ್ತು ಹಣ ಜಪ್ತುಪಂಚನಾಮೆಯ ಕಾಲಕ್ಕೆ ಆದ ಸಂಭಾಷಣೆಯ ಧ್ವನಿ ಮುದ್ರಣದ ಪ್ರತಿಲೇಖವನ್ನು ಒಟ್ಟು 4 ಬಾರಿ ಓದಲು ಹೇಳಿದ್ದು, 2 ಸಿಡಿಗಳನ್ನು ತಯಾರಿಸಿದರು ಎನ್ನುವುದು ಸರಿ . ಅವುಗಳು ನಿಪಿ.6 ರಿಂದ 10 ದಾಖಲೆಯ ಸಿಡಿಗಳು ಎನ್ನುವುದು ಸರಿ . ಪ್ರತಿಲೇಖವನ್ನು ಓದಿ ಹೇಳಿದಾಗ ಮಾಡಿದ ಸಿಡಿಯನ್ನು ಗುರುತಿಸುತ್ತೇನೆ. (ಸೀಲ್ಡ್ ಕವರ್ ಗಳನ್ನು ತೆರೆಯಲು ವಿಶೇಷ ಅಭಿಯೋಜಕರು ಅನುಮತಿ ಕೋರಿದ್ದು ಅನುಮತಿ

ನೀಡಲಾಗಿದೆ.) ಅದನ್ನು **ನಿಪಿ.23 ಮತ್ತು 24** ಎಂದು ಗುರುತಿಸಲಾಯಿತು. ಈ ಎಲ್ಲಾ ಪ್ರಕ್ರಿಯೆ ಬಗ್ಗೆ ನಾನು ದಿಃ29.8.2019 ರಂದು, ದಿಃ6.11.2019 ಮತ್ತು 22.11.2019 ರಂದು ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ಸರಿ . ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಮುಖ್ಯ ವಿಚಾರಣೆಯಲ್ಲಿ ಪಾಟಿ ಸವಾಲಿನಲ್ಲಿ ಹೇಳಿದ ವಿಚಾರಗಳನ್ನು ಹೇಳಿಲ್ಲ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃಆರೋಪಿಯ ಪರಃ ವಕೀಲರ ಕೋರಿಕೆಯ ಮೇರೆಗೆ ಮಧ್ಯಾಹ್ನ 3.00 ಗಂಟೆಗೆ ಮುಂದೂಡಲಾಗಿದೆ.**

**ಸಾಕ್ಷಿಯನ್ನು ದಿನಾಂಕ 30.9.2024 ರಂದು ಮಧ್ಯಾಹ್ನ 3.00 ಗಂಟೆಗೆ ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಯು.ಬಿ.ಆರ್ಃ ವಕೀಲರಿಂದಃ ಆರೋಪಿಯ ಪರಃ**

**10.** 63 ಕೆವಿ ಸಾಮರ್ಥ್ಯದ ಟಿಸಿ ಇದ್ದಾಗ 6 ಪಂಪ್ ಸೆಟ್ಗಳನ್ನು ಅಳವಡಿಸಲಾಗಿತ್ತು ಎನ್ನುವುದು ಸರಿ . ನಂತರ 2 ಹೆಚ್ಚುವರಿ ಪಂಪ್ ಸೆಟ್ ಗಳನ್ನು ಅಳವಡಿಸಿದ್ದ ಕಾರಣ ಲೋಡ್ ಹೆಚ್ಚಾಗಿದ್ದು ನಾನು 100 ಕೆವಿ ಸಾಮರ್ಥ್ಯದ ಟಿಸಿ ಅಳವಡಿಸಲು ಕೇಳಿಕೊಂಡಿದ್ದೇನೆ ಎನ್ನುವುದು ಸರಿ. ನಾನು ಕೇಳಿದಂತೆ 100 ಕೆವಿ ಟಿಸಿ ಯನ್ನು ಅಳವಡಿಸಿದ್ದಾರೆ ಎನ್ನುವುದು ಸರಿ . ಕೆವಿಯಲ್ಲಿ ಏನಾದರು ತೊಂದರೆ ಆದರೆ ಎಲ್ಲಾ ಪಂಪ ಸೆಟ್ ಗಳ ನಿರ್ವಹಣೆಗೆ ತೊಂದರೆ ಆಗುತ್ತದೆ ಎನ್ನುವುದು ಸರಿ . ನನಗೆ 1 ಪಂಪ್ ಸೆಟ್ ಮಾತ್ರ ಸೇರಿದ್ದು, ಉಳಿದಿ ಪಂಪ್ ಸೆಟ್ ಗಳು ಬೇರೆಯವರಿಗೆ ಸೇರಿದೆ. 100 ಕೆವಿ ಟಿಸಿ ಅಳವಡಿಸಲು ಹಣ ಕೇಳುತ್ತಿದ್ದಾರೆ ಎಂದು ಶಂಕರಿ ನನ್ನ ಮುಂದೆ ಹೇಳಿಲ್ಲ ಎನ್ನುವುದು ಸರಿಯಲ್ಲ.

**11.** ಫಿರ್ಯಾದಿಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ನಾನು ಫಿರ್ಯಾದಿಯಲ್ಲಿ ಸಹಿ ಮಾಡಿದ್ದೇನೆ. ರಾಘವೇಂದ್ರ ಮತ್ತು ಆನಂದರವರನ್ನು ಪರಸ್ಪರ ಪರಿಚಯ ಮಾಡಿಸಿಲ್ಲ ಎನ್ನುವುದು ಸರಿಯಲ್ಲ. ಅವರುಗಳು ಖುದ್ದಾಗಿ ದೂರನ್ನು ನೋಡಿಲ್ಲ ಎನ್ನುವುದು ಸರಿ . 63 ಕೆವಿಯಿಂದ 100 ಕೆವಿ ಹಾಕಿದ ನಂತರ ನಮಗೆ ಯಾವುದೇ ತೊಂದರೆ ಆಗಿಲ್ಲ. 63 ಕೆವಿಯಿಂದ 100 ಕೆವಿಗೆ ಬದಲಾವಣೆ ಮಾಡಲು ಶಬುದ್ದೀನ್ ರವರಿಗೆ ಮಾತ್ರ ಅಧಿಕಾರ ಇದೆ ಎನ್ನುವುದು ಸರಿ . ಲೈನ್ ಮ್ಯಾನ್ ಚಂದ್ರು ರವರಿಗೆ ಯಾವುದೇ ಅಧಿಕಾರ ಇಲ್ಲ.

**12.** ಕೆ.ವಿ ಕೈ ನಿಲುಕುವಷ್ಟು ಎತ್ತರದಲ್ಲಿ ಅಳವಡಿಸಲಾಗಿರುತ್ತದೆ. ಅದನ್ನುಯಾರು ಬೇಕಾದರು ತೆಗೆಯಬಹುದು ಎನ್ನುವುದು ಸರಿ . ನಾನು ಖುದ್ದಾಗಿ ಹೊಲಕ್ಕೆ ಹೋಗಿ ನೋಡಿಲ್ಲ. ಫೋಟೋ ಗಳನ್ನು ಯಾಕೆ ತೆಗೆದಿದ್ದಾರೆ ಎನ್ನುವುದು ನನಗೆ ಮಾಹಿತಿ ಇಲ್ಲ. ನಾನು ಪೊಲೀಸರ ಮುಂದೆ ನನ್ನ ಮೊಬೈಲ್ ಮತ್ತು ರೂ.6500/- ಹಣವನ್ನು ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ. ಹಣದ ಮೇಲೆ ದ್ರಾವಣವನ್ನು ಹಾಕಿಲ್ಲ ಮತ್ತು ಮೊಬೈಲ್ ಚೆಕ್ ಮಾಡಿಲ್ಲ ಎನ್ನುವುದು ಸರಿಯಲ್ಲ. ಆರೋಪಿ ನನ್ನಿಂದ ರೂ.6500/- ರೂಪಾಯಿ ಪಡೆದುಕೊಂಡಿಲ್ಲ ಎನ್ನುವುದು ಸರಿಯಲ್ಲ. ಹೊನ್ನೂರು ಸ್ವಾಮಿ ಆರೋಪಿಯೊಂದಿಗೆ ಇರಲಿಲ್ಲ ಎನ್ನುವುದು ಸರಿಯಲ್ಲ.

**13.** ಆರೋಪಿಯ ಕೈಯನ್ನು ಅದ್ದಿದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಹಣ ವಹಿಸಿಕೊಟ್ಟ ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ಪಂಚನಾಮೆಯನ್ನು ಯಾರು ಹೇಳಿ ಬರೆಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಘಟನೆಯಾದ 1 ತಿಂಗಳ ನಂತರ ಪೊಲೀಸರು

ನನ್ನನ್ನು ಕರೆಸಿ ದಾಖಲೆಯನ್ನು ಓದಿಸಿದರು ಮತ್ತು ಫೋಟೋ ತೆಗೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

14. ದಿಃ28.8.2019 ರಂದು ನಾನು 63 ಕೆವಿಯಿಂದ 100 ಕೆವಿ ಟಿ.ಸಿ ಅಳವಡಿಸಲು ಜೆ.ಇ ರವರನ್ನು ಕೇಳಿಕೊಂಡಾಗ ಅವರು ನನಗೆ ಲೈನ್ ಮ್ಯಾನ್ ಚಂದ್ರ ರವರನ್ನು ಕಾಣಲು ತಿಳಿಸಿದರು ಮತ್ತು ನಾನು ಆತನೊಂದಿಗೆ ಮಾತನಾಡಿದ್ದನ್ನು ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದೇನೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 28.8.2019 ರಂದು ನಾನು ಬೆಳಿಗ್ಗೆ 7.45 ಗಂಟೆಯಲ್ಲಿ ಆರೋಪಿಯೊಂದಿಗೆ ಮಾತನಾಡಿದ್ದೇನೆ , ಆತ ಹೊಸ ಕನೆಕ್ಷನ್ ಕೊಡಲು 6500 ಹಣ ಕೊಡಬೇಕು ಎಂದು ಬೇಡಿಕೆ ಇಟ್ಟಿದ್ದನು, ನಾನು ಅಷ್ಟು ಹಣ ಕೊಡಲು ಆಗುವುದಿಲ್ಲ ಎಂದು ಹೇಳಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆತನ ಸಂಭಾಷಣೆಯನ್ನು ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದೇನೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಶಂಕರಿಯವರಿಗೆ ಫೋನ್ ಮಾಡಿದಾಗ ಅವರು 100 ಕೆವಿ ಟಿಸಿಯನ್ನು ಅಳವಡಿಸಿದ ಬಗ್ಗೆ ಹೇಳಿದ್ದು ನಾನು ರೂ.6500/- ಹಣವನ್ನು ಕೊಡದಿದ್ದರೆ ಟಿಸಿ ಕನೆಕ್ಷನ್ ಕಟ್ ಮಾಡುತ್ತಾರೆ ಎಂದು ಹೇಳಿದ್ದಾರೆ ಎಂದು ನನಗೆ ತಿಳಿಸಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಧ್ಯಾಹ್ನ 12.30 ಗಂಟೆಯಲ್ಲಿ ಆರೋಪಿ ನನಗೆ ಕರೆ ಮಾಡಿ ಹಣ ತಂದು ಕೊಡದಿದ್ದರೆ ಕನೆಕ್ಷನ್ ಡಿಸ್ ಕನೆಕ್ಷನ್ ಮಾಡುತ್ತೇನೆ ಎಂದು ಹೇಳಿರುತ್ತಾರೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಂಜೆ ಹಣವನ್ನು ಮುಟ್ಟಿಸುತ್ತೇನೆ ಎಂದು ಹೇಳಿದ್ದೇನೆ ಎನ್ನುವುದು ಸರಿ . ಲಂಚದ ಹಣ ಕೊಡಲು ಇಷ್ಟ ಇಲ್ಲದ ಕಾರಣ ನಾನು ಎಸಿಬಿ ಕಚೇರಿಗೆ ಹೋಗಿ ನಿಪಿ.1 ರಂತೆ ಫಿರ್ಯಾದಿ ಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎಸಿಬಿ ಕಚೇರಿಯಲ್ಲಿ ನನ್ನ ಮೊಬೈಲ್ ಮತ್ತು ರೂ.6500/- ಹಣವನ್ನು ಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಸಿಬಿ ಪೊಲೀಸರು ಮಧ್ಯಾಹ್ನ 3.45 ಗಂಟೆಗೆ ಆನಂದ ಮತ್ತು ರವಾಘವೇಂದ್ರ ರವರನ್ನು ಠಾಣೆಗೆ ಕರೆಸಿದ್ದು ಅವರನ್ನು ನನಗೆ ಪರಿಚಯ ಮಾಡಿಸಿ ನನ್ನ ಫಿರ್ಯಾದಿಯ ನಕಲನ್ನು ಅವರಿಗೆ ಓದಲು ಹೇಳಿದ್ದು ಅವರು ಅದನ್ನು ಓದಿದ್ದಾರೆ ಸರಿ ಇದೆ ಎಂದು ನಾನು ಒಪ್ಪಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ರಾಘವೇಂದ್ರ ರವರನ್ನು ಪಂಚ ನಂಃ1 ಎಂದು ಆನಂದ ರವರನ್ನು ಪಂಚ ನಂಃ2 ಎಂದು ನೇಮಕ ಮಾಡಿದ್ದಾರೆ, ನಾನು ಹಾಜರುಪಡಿಸಿದ 500 ಮುಖಬೆಲೆಯ 13 ನೋಟುಗಳ ಸಂಖ್ಯೆಯನ್ನು ಓದಿ ಒಂದು ಹಾಳೆಯಲ್ಲಿ ಬರೆದುಕೊಂಡರು , ಸದರಿ ಹಾಳೆಗೆ ನಾನು ಸಹಿ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಫಿನಾಪ್ತಲಿನ್ ಪುಡಿ ಮತ್ತು ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ತರಿಸಿ ನನಗೆ ತೋರಿಸಿದರು, ಸೋಡಿಯ ಕಾರ್ಬೋನೇಟ್ ಗೆ ಡಿಸ್ಟಲ್ ವಾಟರ್ ಹಾಕಿ ಒಂದು ಬಣ್ಣ ರಹಿತ ದ್ರಾವಣವನ್ನು ತಯಾರಿಸಿದರು , ಫಿನಾಪ್ತಲಿನ್ ಸವರಿದ ನೋಟುಗಳನ್ನು ರಾಘವೇಂದ್ರ ರವರ ಕೈಗೆ ಕೊಟ್ಟಿದ್ದು, ರಾಘವೇಂದ್ರ ರವರ ಕೈಯನ್ನು ಸದರಿ ದ್ರಾವಣಕ್ಕೆ ಅದ್ದಿದಾಗ ಸದರಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇನ್ಸಪೆಕ್ಟರ್ ರವರು ನನಗೆ ರಾಸಾಯನಿಕ ಪ್ರಕ್ರಿಯೆ ಬಗ್ಗೆ ವಿವರಿಸಿದ್ದಾರೆ, ಇನ್ಸಪೆಕ್ಟರ್ ರವರು ಪಂಚ 1 ರವರ ಮುಖಾಂತರ ಫಿನಾಪ್ತಲಿನ್ ಪುಡಿ ಸವರಿದ ಹಣವನ್ನು ನನ್ನ ಜೇಬಿಗೆ ಇರಿಸಿ ಆರೋಪಿಯು ಹಣವನ್ನು ಬೇಡಿಕೆ ಇಟ್ಟಾಗ ಆತನಿಗೆ ಕೊಡಬೇಕು ಮತ್ತು ಆತ ಹಣ ಪಡೆದ ನಂತರ ತಲೆಯನ್ನು ಸವರುವ ಮೂಲಕ ಸೂಚನೆ ನೀಡಬೇಕು ಎಂದು ತಿಳಿಸಿದರು, ಪಂಚ 2 ರವರು ನನ್ನೊಂದಿಗೆ ಇದ್ದು ನನ್ನ ಮತ್ತು ಆರೋಪಿಯ ನಡುವೆ ನಡೆಯುವ ಸಂಭಾಷಣೆಯನ್ನು ಗಮನಿಸಬೇಕು ಮತ್ತು ಅಲ್ಲಿ ನಡೆಯುವ ಪ್ರಕ್ರಿಯೆ ನಮಗೆ ತಿಳಿಸಬೇಕು ಎಂದು ಹೇಳಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ , ಜೆ.ಇ ಶಾಬುದ್ದೀನ್ ಮತ್ತು

**Spl.C.No.991/2021**
**P.W.1 (C.W.1)**
**Date :30.9.2024**

ಆರೋಪಿ ನಡುವೆ ಆದ ಸಂಭಾಷಣೆಯು ಮೊಬೈಲ್ ನಲ್ಲಿ ದಾಖಲು ಆಗಿದ್ದು ಸದರಿ ಸಂಭಾಷಣೆಯನ್ನು ಪ್ಲೇ ಮಾಡಿ ಲ್ಯಾಪ್ ಟಾಪ್ ಗೆ ಹಾಕಿ 2 ಖಾಲಿ ಸಿಡಿಗಳಲ್ಲಿ ಡೌನ್ ಲೋಡ್ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕ್ರಿಯೆಯನ್ನು ನಿಪಿ.2 ಪಂಚನಾಮೆಯಲ್ಲಿ ಬರೆಯಲಾಗಿದೆ , ಸೋಡಿಯಂ ಕಾರ್ಬೋನೇಟ್ ಮತ್ತು ಡಿಸ್ಟಲ್ ವಾಟರ್ ಹಾಕಿ ತಯಾರಿಸಿದ ದ್ರಾವಣವನ್ನು ಒಂದು ಬಾಟಲಿಯಲ್ಲಿ ಹಾಕಿ ಸೀಲ್ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15. ಪಂಚನಾಮೆ ಮುಗಿದ ನಂತರ ಮಧ್ಯಾಹ್ನ 3.45 ಗಂಟೆಗೆ ನಾನು ಆರೋಪಿಗೆ ಕರೆ ಮಾಡಿದಾಗ ಆತ ಬ್ಯಾಂಕ್ ಹತ್ತಿರ ಬರುವಂತೆ ತಿಳಿಸಿದ , ಅದರಂತೆ ನಾನು ಮತ್ತು ಪಂಚ ನಂಃ2 ಸೇರಿಕೊಂಡು ಬ್ಯಾಂಕ್ ಹತ್ತಿರ ಹೋದಾಗ ಆರೋಪಿ ಇನ್ನೊಬ್ಬನೊಂದಿಗೆ ಸೇರಿಕೊಂಡ ಬ್ಯಾಂಕ್ ಹತ್ತಿರ ಬಂದಿದ್ದು, ನಾನು ಆರೋಪಿಗೆ ಹಣವನ್ನು ಕೊಟ್ಟಿದ್ದು ಆರೋಪಿ ಅದನ್ನು ಪಡೆದುಕೊಂಡು , ಎಣಿಸಿ ತನ್ನ ಜೇಬಿನಲ್ಲಿ ಇಟ್ಟುಕೊಂಡನು, ನಾನು ಸಿಗ್ನಲ್ ಕೊಟ್ಟಿದ್ದು ಇನ್ಸಪೆಕ್ಟರ್ ಬಂದಾಗ ಈತ ನನ್ನಿಂದ ಹಣ ಪಡೆದುಕೊಂಡಿದ್ದಾನೆ ಎಂದು ಹೇಳಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇನ್ಸಪೆಕ್ಟರ್ ರವರು 2 ಬೌಲ್ನಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರು ಮಾಡಿ ಆರೋಪಿಯ 2 ಕೈಗಳನ್ನು ಪ್ರತ್ಯೇಕವಾಗಿ ಸದರಿ ದ್ರಾವಣದಲ್ಲಿ ಅದ್ದಿದಾಗ ಸದರಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ, ಆರೋಪಿಯು ರೂ.6500/- ರೂಪಾಯಿ ಹಣವನ್ನುಇನ್ಸಪೆಕ್ಟರ್ ಮುಂದೆ ಹಾಜರುಪಡಿಸಿದ್ದು , ಪೊಲೀಸರು ಅದನ್ನುಪಂಚರ ಸಮಕ್ಷಮದಲ್ಲಿ ಅಮಾನತ್ತುಪಡಿಸಿಕೊಂಡರು ಮತ್ತು ಪ್ಯಾಂಟ್ ನ ಜೇಬ್ ನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ಅದು ಸಹ ಗುಲಾಬಿ ಬಣ್ಣಕ್ಕೆ ತಿರುಗಿದ್ದು ಸದರಿ ದ್ರಾವಣವನ್ನು ಅಮಾನತ್ತುಪಡಿಸಿಕೊಂಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಬೇರೆ ಪ್ಯಾಂಟ್ ವ್ಯವಸ್ಥೆ ಮಾಡಿ ಪ್ಯಾಟ್ ನ್ನು

ಅಮಾನತ್ತುಪಸಿಡಿಕೊಂಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾರ್ವಜನಿಕ ಸ್ಥಳದಲ್ಲಿ ಪಂಚನಾಮೆ ಮಾಡುವುದು ಸರಿ ಕಾಣುವುದಿಲ್ಲ ಎಂದು ನಾವೆಲ್ಲರೂ ಸೇರಿಕೊಂಡು ಆರೋಪಿಯನ್ನು ಜೆಸ್ಕಾಂ ಕಚೇರಿಗೆ ಕರೆದುಕೊಂಡು ಹೋದೆವು, ನಾನು ಮತ್ತು ಆರೋಪಿ ಆತನೊಂದಿಗೆ ಸಂಭಾಷಣೆಯನ್ನು ನಾನು ರೆಕಾರ್ಡ್ ಮಾಡಿಕೊಂಡಿದ್ದು ಅದನ್ನು ಹಾಜರುಪಡಿಸಿದ್ದು ಅದನ್ನು ಪ್ಲೇ ಮಾಡಿದಾಗ ನಾನು ಮತ್ತು ಆರೋಪಿ ಮಾತನಾಡಿದ ಸಂಭಾಷಣೆ ವಾಯ್ಸ ರೆಕಾರ್ಡ್‌ರನಲ್ಲಿ ದಾಖಲು ಆಗಿದ್ದು ಅದನ್ನು 2 ಸಿಡಿಗೆ ರೆಕಾರ್ಡ್ ಮಾಡಲಾಯಿತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.10 ಮತ್ತು 11 ರವರನ್ನು ಸದರಿ ಸ್ಥಳಕ್ಕೆ ಕರೆಸಿದ್ದು ಅವರ ಸಮಕ್ಷಮದಲ್ಲಿ ಹಣವಹಿಸಿಕೊಟ್ಟ ಪಂಚನಾಮೆ ಕಾಲಕ್ಕೆ ದಾಖಲಾದ ಸಿಡಿಯನ್ನು ಪ್ಲೇಮಾಡಿ ಅವರಿಬ್ಬರಿಗೆ ಕೇಳಿಸಿದಾಗ ಅವರು ಆರೋಪಿಯ ಧ್ವನಿಯನ್ನು ಗುರುತಿಹಿಡಿದರು , ಚಾಸಾ.15 ರಲ್ಲಿ ರವರು ನನ್ನ ಧ್ವನಿಯನ್ನು ಗುರುತಿಸಿದ್ದಾರೆ , ಆರೋಪಿಯು ತಾನು ಹಣ ಸ್ವಾಧೀನ ಹೊಂದಿದ್ದ ಬಗ್ಗೆ ವಿವರಣೆಯನ್ನು ಬರೆದುಕೊಟ್ಟಿದ್ದ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**16.** ಆನಂದ ಮತ್ತು ಸಂತೋಷ್ ಯಾರು ಎಂದು ನನಗೆ ಗೊತ್ತಿಲ್ಲ. ಚಾಸಾ.15 ಅಗಸರ ಈರಣ್ಣ ರವರ ಪರಿಚಯ ಇದೆ. ಆತನಿಗೆ ನನ್ನ ಧ್ವನಿ ಗೊತ್ತಾಗುತ್ತದೆ ಆದರೆ ನಮ್ಮ ಮನೆಯವರ ಧ್ವನಿ ಗೊತ್ತಾಗುವುದಿಲ್ಲ. ಮೊಬೈಲ್ ನಲ್ಲಿ ಇದ್ದ ಧ್ವನಿಯನ್ನು ಸಿಡಿಗೆ ಯಾರ ರೀತಿ ಡೌನ್ ಲೋಡ್ ಮಾಡುತ್ತಾರೆ ಎನ್ನುವ ಪ್ರಕ್ರಿಯೆ ಬಗ್ಗೆ ನನಗೆ ಮಾಹಿತಿ ಇಲ್ಲ. ಯಾರು ಅದನ್ನು ಅಳವಡಿಸಿದ್ದಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಧ್ವನಿ ಮುದ್ರಣದಲ್ಲಿ ಪೂರ್ಣ ಸಂಭಾಷಣೆ ಇರುವುದಿಲ್ಲ. ಮೊಬೈಲ್ ನಲ್ಲಿ ಧ್ವನಿ ಮುದ್ರಣ ಆಗಿದ್ದನ್ನು ಮತ್ತು ಕಂಪ್ಯೂಟರ್ ನಲ್ಲಿ ಹಾಕಿ ಸಿಡಿ ಮಾಡಿದ್ದು ಮತ್ತು ಪ್ರತಿಲೇಖ ಮಾಡಿದ್ದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ. ನನಗೆ ಪೇಪರ್

ನ್ನು ಕೊಟ್ಟು ಓದಲು ಹೇಳಿದ್ದಾರೆ. ನಿಪಿ.17 ರಿಂದ 24 ಸಿಡಿಯಲ್ಲಿ ಯಾವ ವಿಷಯದ ಬಗ್ಗೆ ಧ್ವನಿ ಮುದ್ರಣ ಇದೆ ಮತ್ತು ಅದರ ಪ್ರತಿಲೇಖ ಯಾವಾಗ ತಯಾರಿಸಲಾಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ಎಂಒ 1 ಮತ್ತು 7 ರಲ್ಲಿ ಯಾವುದೇ ದ್ರಾವಣ ಇಲ್ಲ. ಎಂಒ 2 ಮತ್ತು 5 ರಲ್ಲಿ ಇರುವ ದ್ರಾವಣಕ್ಕೆ ಬಣ್ಣ ಇಲ್ಲ. ಎಂಒ 6 ಆರೋಪಿಯ ಕೈ ತೊಳೆಸಿದ ದ್ರಾವಣ ಅಲ್ಲ ಎನ್ನುವುದು ಸರಿಯಲ್ಲ. ನಿಪಿ.3 , 5 ಮತ್ತು 11 ಫೋಟೋ ಗಳನ್ನು ನಾನು ಕುಳಿತಿದ್ದಾಗ ತೆಗೆದಿದ್ದಾರೆ.

**17.** ದಿಃ6.11.2019 ರಂದು ನನ್ನನ್ನು ಮತ್ತು ಇಬ್ಬರು ಪಂಚರಾದ ಈರಮ್ಮ ಮತ್ತು ಲೋಕನಾಥ ರವರನ್ನು ಎಸಿಬಿ ಕಚೇರಿಗೆ ಕರೆಸಿ ನನ್ನ ಮತ್ತು ಆರೋಪಿಯ ನಡುವೆ ಹಣವಹಿಸಿಕೊಟ್ಟ ಪಂಚನಾಮೆ ಮತ್ತು ಹಣ ಜಪ್ತುಪಂಚನಾಮೆಯ ಕಾಲಕ್ಕೆ ಆದ ಸಂಭಾಷಣೆಯ ಧ್ವನಿ ಮುದ್ರಣದ ಪ್ರತಿಲೇಖವನ್ನು ಒಟ್ಟು 4 ಬಾರಿ ಓದಲು ಹೇಳಿದ್ದು, 2 ಸಿಡಿಗಳನ್ನು ತಯಾರಿಸಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**18.** ಪೊಲೀಸರು ನನ್ನನ್ನು ತಮ್ಮ ಕಚೇರಿಯಿಂದ ಬ್ಯಾಂಕ್ ನ ಹತ್ತಿರ ಕರೆದುಕೊಂಡು ಹೋಗಿದ್ದಾರೆ. ಅವರು ನನಗೆ ಒತ್ತಾಯ ಮಾಡಿ ಆರೋಪಿಗೆ ಹಣ ಕೊಡಲು ಹೇಳಿದ್ದಾರೆ ಎನ್ನುವುದು ಸರಿ . ಪೊಲೀಸರ ಒತ್ತಾಯದಿಂದ ನಾನು ಆರೋಪಿಗೆ ಹಣ ಕೊಡಲು ಹೋಗಿದ್ದೆ. ಆಗ ನನ್ನೊಂದಿಗೆ ಎಲ್ಲಾರು ಇದ್ದರು. ಆರೋಪಿ ನನ್ನಿಂದ ಹಣ ಪಡೆದುಕೊಂಡಿಲ್ಲ ಎನ್ನುವುದು ಸರಿಯಲ್ಲ. ಆರೋಪಿ ನನ್ನಿಂದ ಹಣ ಪಡೆದು ಜೇಬಿನಲ್ಲಿ ಇಟ್ಟುಕೊಂಡಿಲ್ಲ ಮತ್ತು ಆತನ ಕೈ ತೊಳೆದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬಂದಿಲ್ಲ ಎನ್ನುವುದು ಸರಿಯಲ್ಲ. ಪಂಚನಾಮೆಯನ್ನು ಲೋಕಾಯುಕ್ತ ಕಚೇರಿಯಲ್ಲಿ ಬರೆಯಲಾಗಿದೆ ಎನ್ನುವುದು ಸರಿಯಲ್ಲ. ಆರೋಪಿ ನನ್ನ ಮುಂದೆ ಹಣದ ಬೇಡಿಕೆ ಇಟ್ಟಿಲ್ಲ. ಶಂಕ್ರಿ ನನಗೆ ತಿಳಿಸಿದ್ದರು.

**Spl.C.No.991/2021**
**P.W.1 (C.W.1)**
**Date :30.9.2024**

**19.** ದಿಃ29.8.2019 ರಂದು, ದಿಃ6.11.2019 ಮತ್ತು 22.11.2019 ರಂದು ಹೇಳಿಕೆ ಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಬಳ್ಳಾರಿಯಲ್ಲಿ ವಾಸ ಇರುವುದರಿಂದ ಹೊಲದಲ್ಲಿ ಏನಾಗಿದೆ ಎನ್ನುವುದು ನನಗೆ ಖುದ್ದಾಗಿ ಗೊತ್ತಿಲ್ಲ. 100 ಕೆವಿ ಯಲ್ಲಿ ಏನಾದರು ತೊಂದರೆ ಆದಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ ಎನ್ನುವುದು ಸರಿ . ಶ್ರೀನಿವಾಸ , ನಾರಾಯಣಪ್ಪ , ವೆಂಕಟೇಶ್ , ಸ್ವಾಮಿ , ಈಶ್ವರ ರೆಡ್ಡಿ , ಮಲ್ಲಿಕಾರ್ಜುನ , ವೆಂಕಟರಾವ್ ಮತ್ತು ಸುರೇಶ್ ರವರುಗಳಿಗೆ ಇತರ ಪಂಪ್ ಸೆಟ್ ಗಳು ಇರುತ್ತವೆ. 63 ಕೆವಿ ಅಳವಡಿಸಿದ ಸಂದರ್ಭದಲ್ಲಿನಾನೇ ಸ್ವಂತ ಖರ್ಚು ಮಾಡಿ ಕಂಬಗಳನ್ನು ಅಳವಡಿಸಿಕೊಂಡಿರುತ್ತೇನೆ. ಅದರಂತೆ 100 ಕೆವಿ ಅಳವಡಿಸುವ ಸಮಯದಲ್ಲಿ ಸಹ ಮೇಲಿನ ವ್ಯಕ್ತಿಗಳು ಹಣವನ್ನು ಕೊಟ್ಟಿಲ್ಲ. ಉಳಿದ ಪಂಪ್ ಸೆಟ್ ದಾರರಿಂದ ಹಣವನ್ನು ಕೊಡಿಸಬೇಕು ಎಂದು ನಾನು ಆರೋಪಿಗೆ ಒತ್ತಾಯ ಮಾಡುತ್ತಿದ್ದೆ ಎನ್ನುವುದು ಸರಿಯಲ್ಲ. ಆರೋಪಿ ಅದಕ್ಕು ನನಗೂ ಸಂಬಂಧ ಇಲ್ಲ ಎಂದುನನ್ನ ಮುಂದೆ ಹೇಳಿದ್ದರಿಂದ ನಾನು ಆತನ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. 20.

**<u>ಮರು-ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

**<u>ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**